2015–16ನೇ ಸಾಲಿನಲ್ಲಿ ಪುಲಗೂರು ಕೋಟೆ ಗ್ರಾಮ ಪಂಚಾಯತ್‌ನಲ್ಲಿ ನಡೆದಿರುವ ಜಮಾಬಂದಿ ವರದಿಯನ್ನು ಸಲ್ಲಿಸಿದ್ದಾರೆ.

4. ಎರಡನೇ (2ನೇ) ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ –

ಜಮಾಬಂದಿ ನಡೆಸಲು ದಿನಾಂಕ:22/01/18ರಂದು ದಿನಾಂಕ ನಿಗದಿಪಡಿಸಿ, ಸಹಾಯಕ ನಿರ್ದೇಶಕರು, ಅಕ್ಷರ ದಾಸೋಹ ಇಲಾಖೆ, ಶ್ರೀನಿವಾಸಪುರ ರವರನ್ನು ನೋಡಲ್ ಅಧಿಕಾರಿಯನ್ನಾಗಿ ದಿನಾಂಕ:11/12/17ರ ಪತ್ರದಲ್ಲಿ ಕಾರ್ಯನಿರ್ವಾಹಕ ಅಧಿಕಾರಿ, ಶ್ರೀನಿವಾಸಪುರ ತಾಲ್ಲೂಕ್ ಪಂಚಾಯತ್‌ರವರು ರವರು ನೇಮಿಸಿ ಆದೇಶಿಸಿದ್ದಾರೆ. ಕರ್ನಾಟಕ ಸರ್ಕಾರದ ಸುತ್ತೋಲೆ ಅನ್ವಯ ಪ್ರತಿ ವರ್ಷ ಜಮಾಬಂದಿ ತಂಡವನ್ನು ಕಾರ್ಯನಿರ್ವಾಹಕ ಅಧಿಕಾರಿಗಳು ರಚನೆ ಮಾಡಿ, ಜಮಾಬಂದಿ ನಡೆಸುವ ದಿನಾಂಕಗಳನ್ನು ನಿಗದಿಪಡಿಸ ಬೇಕಾಗಿದೆ. ಜಮಾಬಂದಿ ತಂಡದ ಮುಖ್ಯಸ್ಥರಾದ ನೋಡಲ್ ಅಧಿಕಾರಿಗಳು ಗ್ರಾಮ ಪಂಚಾಯತ್‌ನಲ್ಲಿ ನಿಗದಿತ ದಿನಾಂಕಗಳಂದು ಜಮಾಬಂದಿ ನಡೆಸಿ, ತದನಂತರ ಎರಡು ದಿನಗಳೊಳಗಾಗಿ ಜಮಾಬಂದಿ ವರದಿಯನ್ನು ನೋಡಲ್ ಅಧಿಕಾರಿಗಳು ಸ್ಪಷ್ಟ ವರದಿಯೊಂದಿಗೆ ಗ್ರಾಮ ಪಂಚಾಯತ್ ಮತ್ತು ತಾಲ್ಲೂಕ್ ಪಂಚಾಯತ್‌ಗೆ ಸಲ್ಲಿಸ ಬೇಕಾಗುತ್ತದೆ. ಅದರಂತೆ, ನೋಡಲ್ ಅಧಿಕಾರಿಗಳು ತಮ್ಮ ಗ್ರಾಮ ಪಂಚಾಯತ್‌ನಲ್ಲಿ ನಿಯಮಾನುಸಾರ ಜಮಾಬಂದಿಯನ್ನು ನಡೆಸಿದ್ದು, ಹಣ ದುರುಪಯೋಗದ ಬಗ್ಗೆ ಹಾಜರಿದ್ದ ಸಾರ್ವಜನಿಕರಿಂದ ಯಾವುದೇ ರೀತಿಯ ದೂರುಗಳು ಬಂದಿಲ್ಲ. ಶ್ರೀನಿವಾಸಪುರ ತಾಲ್ಲೂಕನ್ನು ಕರ್ನಾಟಕ ರಾಜ್ಯದಲ್ಲಿ ಗುಡಿಸಲು ರಹಿತ ತಾಲ್ಲೂಕನ್ನಾಗಿ ಮಾಡಲು ಪೈಲಟ್ ಯೋಜನೆಯಲ್ಲಿ ಆಯ್ಕೆಯಾಗಿದ್ದು, ಸದರಿ ವಸತಿ ಯೋಜನೆಯಲ್ಲಿ ಗ್ರಾಮ ಪಂಚಾಯತ್‌ಗೆ 740 ಮನೆಗಳು ಮಂಜೂರಾಗಿವೆ. ಸ್ವಚ್ಛ ಭಾರತ್ ಮಿಷನ್ ಯೋಜನೆ ಅಡಿಯಲ್ಲಿ ಸಂಪೂರ್ಣ ಬಯಲು ಬಹಿರ್ದೆಸೆ ಮುಕ್ತ ಗ್ರಾಮ ಪಂಚಾಯತ್ ಎಂದು ಘೋಷಣೆ ಮಾಡಲು, ಮೇಲಾಧಿಕಾರಿಗಳಿಂದ ಗುರಿ ನಿಗಧಿಪಡಿಸಿದೆ. ಸದರಿ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರಿಂದ ಜಮಾಬಂದಿ ನಡೆಸುವುದು ವಿಳಂಬವಾಗಿದೆಯೆಂದು ಹೇಳಿದ್ದಾರೆ.

5. ದೂರಿನ ಬಗ್ಗೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಕೋಲಾರ ರವರಿಂದ ವರದಿಯನ್ನು ಕೇಳಲಾಗಿ, ಸದರಿಯವರ ಸೂಚನೆಯನ್ವಯ 1ನೇ ಎದುರುದಾರರ ಪತ್ರದೊಂದಿಗೆ 2015–16ನೇ ಸಾಲಿನ ಪುಲಗೂರು ಕೋಟೆ ಗ್ರಾಮ ಪಂಚಾಯತ್‌ನ ಜಮಾಬಂದಿ ವರದಿಯ ಪ್ರತಿಯನ್ನು ಸಲ್ಲಿಸಿದ್ದಾರೆ.

